<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.07/2015

ಚಾಸಾ-3 ಪ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 26.06.2019

| | | |
|---|---|---|
| ಹೆಸರು | ಃ | ಗುರಪ್ಪ ಬಟಗೇರಿ |
| ತಂದೆ ಹೆಸರು | ಃ | ಶಾಂತಪ್ಪ |
| ವಯಸ್ಸು | ಃ | 52-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿ ಪರಿಚಯವಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಪಂಚನಾಮೆ ಮೇಲಿನ ಸಾಕ್ಷಿ ಸಹಿಯನ್ನು ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಅದರಂತೆ ಮುದ್ದೆಮಾಲುಗಳ ಮೇಲಿನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮೂಲ ಪ್ರಕರಣ ಸಿಸಿ ನಂ.131/2011 ರಲ್ಲಿ ಎಂ.ಒ-1 ಎ ದಿಂದ 4 ಎ ಎಂದು ಗುರುತಿಸಲಾಗಿದೆ.

ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 17.05.2010 ರಂದು ಚುನಾವಣೆ ಮತಎಣಿಕೆ ಸಂಬಂಧಿಸಿದಂತೆ ಅಫಜಲಪೂರ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಗಲಾಟೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ದಿನಾಂಕ 18.05.2010 ರಂದು ಮದ್ಯಾಹ್ನ 12.30 ರಿಂದ 1.30 ರವರೆಗೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ಹಲ್ಲೆಗೆ ಬಳಸಿದ ನಾಲ್ಕು ಕಲ್ಲುಗಳನ್ನು ಜಪ್ತಿಪಡಿಸಿಕೊಂಡು ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ